**ಕರ್ನಾಟಕ ಸರ್ಕಾರ**
**ಕೃಷಿ ಮಾರಾಟ ಇಲಾಖೆ**

ಸಂ:ಕೃಮಾಇ/ನಿಯವಿ/ಇತರೆ/247/17-18

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಬೆಂಗಳೂರು, ದಿನಾಂಕ:27/03/2018

:: **ಸುತ್ತೋಲೆ** ::

**ವಿಷಯ**:- ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಕ್ರಮ ಜರುಗಿಸುವ ಹಾಗೂ ಮಾಹಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಹಂಚಿಕೊಳ್ಳುವುದರ ಕುರಿತು.

**ಉಲ್ಲೇಖ**:- ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ನವನಗರ, ಹುಬ್ಬಳ್ಳಿ ಇವರ ದಿ:20/01/2018ರ ಪತ್ರ.

- - - - - -

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಪ್ರಕಾರ ಎಲ್ಲಾ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟು ಮತ್ತು ಸಾಗಣೆಯನ್ನು ಅಧಿಕೃತ ಬಿಲ್‌ಗಳು ಮತ್ತು ಇ-ವೇ ಬಿಲ್‌ಗಳ (ಜಿ.ಎಸ್.ಟಿ ತೆರಿಗೆದಾಯಕ ಸರಕುಗಳ ಸಾಗಣೆ ರೂ.50,000/- ಕ್ಕಿಂತ ಹೆಚ್ಚು ಇದ್ದರೆ) ಮೂಲಕವೇ ಎಲ್ಲಾ ವ್ಯವಹಾರಸ್ಥರು ಮಾಡಬೇಕಾಗಿರುತ್ತದೆ. ಆದ್ದರಿಂದ, ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣಗಳಲ್ಲಿ ಉತ್ಪನ್ನಗಳನ್ನು ಸರಕು ವಾಹನಗಳಿಗೆ ಲೋಡ್ ಮಾಡುತ್ತಿರುವ ಮತ್ತು ಅಧಿಕೃತ ಬಿಲ್‌ಗಳನ್ನು ಹೊಂದಿಲ್ಲದೆ ಸಾಗಣೆಯಾಗುತ್ತಿರುವುದು ಕಂಡುಬಂದಲ್ಲಿ ಅಂತಹ ಮಾಹಿತಿಯನ್ನು ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ವಾಣಿಜ್ಯ ತೆರಿಗೆ ಅಧಿಕಾರಿಗಳು ಅಗತ್ಯ ಕ್ರಮ ಜರುಗಿಸಲು ಅನುಕೂಲವಾಗುವಂತೆ ಮಾರುಕಟ್ಟೆ ಇಲಾಖೆ ಅಧಿಕಾರಿ/ಸಿಬ್ಬಂದಿಗಳು, ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳು/ಸಿಬ್ಬಂದಿಗಳು ಜಾರಿ ವಿಭಾಗದ ಜಿ.ಎಸ್.ಟಿ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಕ್ರಮ ವಹಿಸಲು ಸೂಚನೆ ನೀಡಲು ಈ ಕಛೇರಿಯನ್ನು ಕೋರಿರುತ್ತಾರೆ. (ಪ್ರತಿ ಲಗತ್ತಿಸಿದೆ)

ರಾಜ್ಯದ ರಾಜಸ್ವದ ಹಿತದೃಷ್ಟಿಯಿಂದ ಹಾಗೂ ಕಾನೂನಾತ್ಮಕ ವಹಿವಾಟು ನಡೆಯಲು ಕ್ರಮಗಳನ್ನು ವಹಿಸುವುದು ಸೂಕ್ತವಿದ್ದು, ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅಗತ್ಯ ಕ್ರಮ ವಹಿಸಲು ಎಲ್ಲಾ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದೆ.

26/03/18

(ಎಂ.ಬಿ.ರಾಜೇಶ್ ಗೌಡ)
ನಿರ್ದೇಶಕರು

**ಇವರಿಗೆ**:-

1. ರಾಜ್ಯದಲ್ಲಿನ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ.
2. ಹೆಚ್ಚುವರಿ ನಿರ್ದೇಶಕರು (ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ಬೆಂಗಳೂರು.
3. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು.
4. ಮುಖ್ಯ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು.
5. ಅಧೀಕ್ಷಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಕೃಷಿ ಮಾರಾಟ ಇಲಾಖೆ, ಬೆಂಗಳೂರು.
6. ಜಂಟಿ ನಿರ್ದೇಶಕರು (ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ಉತ್ತರ ವಲಯ, ಹುಬ್ಬಳ್ಳಿ, ದಕ್ಷಿಣ ವಲಯ, ಬೆಂಗಳೂರು.
7. ವಿಶೇಷ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ.
8. ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳಿಗೆ. 9. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂ.ವಾತೆಜಆ/ಜಾರಿ/ಹು/2017-18/ಬಿ- 2013

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಚೇರಿ,
(ಜಾರಿ), ನವನಗರ,ಹುಬ್ಬಳ್ಳಿ
ದಿನಾಂಕ: 20-01-2018.

ಇವರಿಗೆ,

ಮಾನ್ಯ ಜಂಟಿ ನಿರ್ದೇಶಕರು,
ಕಾನೂನು ಜಾರಿ ಕೋಶ (ಉತ್ತರ ವಲಯ),
ಹುಬ್ಬಳ್ಳಿ. ಕೃಷಿ ಮಾರಾಟ ಇಲಾಖೆ

1-2-18
898

ಮಾನ್ಯರೇ,

ವಿಷಯ:- ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಕ್ರಮ ಜರುಗಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಪ್ರಕಾರ ಎಲ್ಲಾ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟು ಮತ್ತು ಸಾಗಣೆಯನ್ನು ಅಧಿಕೃತ ಬಿಲ್ಲುಗಳು ಮತ್ತು ಇ-ವೇ ಬಿಲ್ಲುಗಳ (ಜಿ.ಎಸ್.ಟಿ ತೆರಿಗೆದಾರರ ಸರಕುಗಳ ಸಾಗಣೆ ರೂ-50,000/- ಕ್ಕಿಂತ ಹೆಚ್ಚು ಇದ್ದರೆ) ಮೂಲಕವೇ ಎಲ್ಲಾ ವ್ಯವಹಾರಸ್ಥರು ಮಾಡಬೇಕಾಗಿರುತ್ತದೆ. ಆದುದ್ದರಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣಗಳಲ್ಲಿ ಉತ್ಪನ್ನಗಳನ್ನು ಸರಕು ವಾಹನಗಳಿಗೆ ಲೋಡ್ ಮಾಡುತ್ತಿರುವ ಮತ್ತು ಅಧಿಕೃತ ಬಿಲ್ಲುಗಳನ್ನು ಹೊಂದಿಲ್ಲದೆ ಸಾಗಣೆಯಾಗುತ್ತಿರುವುದು ಕಂಡುಬಂದಲ್ಲಿ ಅಂತಹ ಮಾಹಿತಿಯನ್ನು ಸರ್ಕಾರದ ರಾಜಸ್ವದ ಹಿತದೃಷ್ಟಿಯಿಂದ ಈ ಕಚೇರಿಯ ಅಧಿಕಾರಿಗಳು ಅಗತ್ಯ ಕ್ರಮ ಜರುಗಿಸಲು ಅನುಕೂಲವಾಗುವಂತೆ ತಮ್ಮ ಕಚೇರಿಯ ಅಧಿಕಾರಿ/ಸಿಬ್ಬಂಧಿಗಳು ಹಾಗೂ ತಮ್ಮ ವ್ಯಾಪ್ತಿಯಲ್ಲಿನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳು/ಸಿಬ್ಬಂದಿಗಳು ನಮ್ಮ ಕಚೇರಿಯ ಜಾರಿ ವಿಭಾಗದ ಜಿ.ಎಸ್.ಟಿ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಕ್ರಮ ವಹಿಸುವಂತೆ ಕೋರಿದೆ.

ಮಾಹಿತಿಯನ್ನು ಮೋಬೈಲ್ ಸಂಖ್ಯೆ:9449015699/9448094754 ಇವುಗಳಿಗೆ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/-.
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಜಾರಿ), ನವನಗರ, ಹುಬ್ಬಳ್ಳಿ

ಪ್ರತಿಯನ್ನು ಮಾನ್ಯ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿದೆ.
ಪ್ರತಿಯನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, 2ನೇ ರಾಜಭವನ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಿದೆ.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಜಾರಿ), ನವನಗರ, ಹುಬ್ಬಳ್ಳಿ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾರಿ) ನವನಗರ, ಹುಬ್ಬಳ್ಳಿ.